ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:.ವಿವಾದ:71/2015-16 ದಿ:24-06-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಬಿ. ಯಶೋದಮ್ಮ ಗಂಡ:ಬಿ. ದೊಡ್ಡಹೊನ್ನಾರೆಡ್ಡಿ
ಬೂದುಗುಪ್ಪ ಗ್ರಾಮ ಸಿರುಗುಪ್ಪ ತಾಲೂಕ
2) ಬಿ.ರಘು ಮಂಜುನಾಥ ರೆಡ್ಡಿ ತಂದೆ: ಭೀಮರೆಡ್ಡಿ
ಬೂದುಗುಪ್ಪ ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಜೆ ವಸಂತ ಗಂಡ: ಜೆ. ಲಕ್ಷ್ಮಣ ರೆಡ್ಡಿ
ಸಿರುಗುಪ್ಪ ತಾ: ಸಿರುಗುಪ್ಪ

**ವಿವಾದಿತ ಜಮೀನಿನ ವಿವರ**

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ: | ವಹಿವಾಡು ಸಂಖ್ಯೆ: |
|---|---|---|---|---|
| ಬೂದುಗುಪ್ಪ ಗ್ರಾಮ | 64 C/3b | 1-00 | H 20/2015-16 | 86/2015-16 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ಸ.ನಂ. 64/ C/3b ವಿಸ್ತೀರ್ಣ 1-00 ಜಮೀನಿಗೆ ಸಂಬಂಧಿಸಿದಂತೆ ಸಿರುಗುಪ್ಪ ಉಪ ನೊಂದಣಿ ಕಛೇರಿ ದಾನ ಪತ್ರ ನಂ: 05265/15-16 Dt.04-11-2015 ಪ್ರಕಾರ ಬಿ. ರಘು ಮಂಜುನಾಥ ರೆಡ್ಡಿ ತಂದೆ: ಭೀಮರೆಡ್ಡಿ ಇವರ ಹೆಸರಿನಲ್ಲಿ ದಾನಪತ್ರ ಪ್ರಕಾರ ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಜೆ. ವಸಂತ ಗಂಡ: ಜೆ.ಲಕ್ಷ್ಮಣ ರೆಡ್ಡಿ , ಸಿರುಗುಪ್ಪ ಇವರು ದಿ: 27-11-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು ದಿ: 18-3-2016, 2-4-2016, 20-5-2016 ಮತ್ತು 3-6-2016 ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ ರಘು ಮಂಜುನಾಥ ರೆಡ್ಡಿ ಬಿ. ತಂದೆ: ಭೀಮರೆಡ್ಡಿ, ಬೂದುಗುಪ್ಪ ಗ್ರಾಮ ಹಾಲಿ ವಾಸ ಬೆಂಗಳೂರು ಇವರು ಬೂದುಗುಪ್ಪ ಗ್ರಾಮದ ಸ.ನಂ. 64/ C/3b ವಿಸ್ತೀರ್ಣ 1-00 ಜಮೀನು ನನ್ನ ಅಜ್ಜಿಯಾದ ಜಿ. ಯಶೋದಮ್ಮ ಗಂಡ:ಳ ಲೇಟ್ ಬಿ. ದೊಡ್ಡ ಹೊನ್ನಾರೆಡ್ಡಿ ಯವರಿಂದ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: 5265/2015-16 ದಿ:4-11-2015 ರಂದು ದಾನ ಪತ್ರ ಪ್ರಕಾರ ನೊಂದಣಿ ಹೊಂದಿ ಹಕ್ಕು ಬದಲಾವಣೆ ಸಮಯದಲ್ಲಿ ಜೆ.ವಸಂತ ಗಂಡ: ಜೆ..ಲಕ್ಷ್ಮಣ ರೆಡ್ಡಿ ಇವರು ನಿರಾಧಾರವಾಗಿ ತಮಗೂ ಆಸ್ತಿಯಲ್ಲಿ ಪಾಲು ಬರಬೇಕೆಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಯಾವುದೇ ಪೂರಕ ದಾಖಲೆಪತ್ರಗಳನ್ನು ಸಲ್ಲಿಸಿರುವುದಿಲ್ಲ. ಹಾಗೂ ಲಿಖಿತ ಹೇಳಿಕೆಗಳನ್ನು ಸಹ ನೀಡಿರುವುದಿಲ್ಲ ಆದ್ದರಿಂದ ನಿರಾಧಾರವಾದ ತಕರಾರು ಅರ್ಜಿಯನ್ನು ತಳ್ಳಿಹಾಕಿ ಉಪನೊಂದಣಿ ಕಛೇರಿಯ ನೊಂದಾಯಿತ ದಾನಪತ್ರ ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಹಾಗೂ ದಿ:2-4-2014 ರಂದು ನನ್ನ ಅಜ್ಜಿಯವರ ಆಸ್ತಿ ದಾನವಾಗಿ ಪಡೆದಿರುತ್ತೇನೆ. ನನ್ನ ಅಜ್ಜಿಯವರಿಂದ ಪೂರ್ಣ ಸಮ್ಮತಿ ಯಿಂದ ರಿಜಿಸ್ಟರ್ ಮಾಡಿಸಿಕೊಟ್ಟಿರುತ್ತಾರೆಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

## ಪ್ರತಿವಾದಿಗಳು

ಪ್ರತಿವಾದಿಗಳಾದ ಜೆ. ವಸಂತ ಗಂಡ: ಜೆ.ಲಕ್ಷ್ಮಣರೆಡ್ಡಿ ಸಿರುಗುಪ್ಪ ಇವರು ಬೂದುಗುಪ್ಪ ಗ್ರಾಮದ ಸ.ನಂ. 64/ C/3b ವಿಸ್ತೀರ್ಣ 1-00 ಜಮೀನು ಜಿ.ಯಶೋದಮ್ಮ ಗಂಡ: ಲೇಟ್ ಬಿ.ದೊಡ್ಡ ಹೊನ್ನಾರೆಡ್ಡಿ ಯವರಿಂದ ರಘು ಮಂಜುನಾಥ ರೆಡ್ಡಿ ಬಿ.ತಂದೆ: ಭೀಮರೆಡ್ಡಿ ಬೂದುಗುಪ್ಪ ಇವರ ಹೆಸರಿಗೆ ದಾನಪತ್ರ ಪ್ರಕಾರ ಹಕ್ಕು ಬದಲಾವಣೆ ಸಂದರ್ಭದಲ್ಲಿ ದಿ:27-11-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ದಿ: 18-03-2016, 02-04-2016, 20-05-2016, 03-06-2016 ರಂದು ಹಾಜರಾಗಿರುತ್ತಾರೆ. ದಿ:02-4-2016 ರಂದು ವಿಚಾರಣೆ ಸಮಯದಲ್ಲಿ ಹಿರಿಯ ಸಿವಿಲ್ ನ್ಯಾಯಾಲಯ ಸಿರುಗುಪ್ಪದಲ್ಲಿ ಪಾಲು ವಿಭಾಗಕ್ಕೆ ಮತ್ತು ಇಂಜಕ್ಷನ್ ಆದೇಶ ನೀಡಲು ಅರ್ಜಿ ದಾಖಲು ಮಾಡಲಾಗಿದೆ ಎಂದು ಲಿಖಿತ ಹೇಳಿಕೆ ನೀಡಿರುತ್ತಾರೆ. ಹಾಗೂ ದಿ:23-06-2016 ರಂದು ಪ್ರಕರಣವನ್ನು ಹಿರಿಯ ಸಿವಿಲ್ ನ್ಯಾಯಾಲಯ ಸಿರುಗುಪ್ಪ ಕ್ಕೆ ವರ್ಗಾಯಿಸಲು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ನಂ: 5265/2015-16 ದಿ: 4-11-2015 ರ ದಾನ ಪತ್ರ ನೊಂದಣಿ ಪ್ರಕಾರ ಹಾಗೂ ಸಿವಿಲ್ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ಸ.ನಂ.64/ C/3b ವಿಸ್ತೀರ್ಣ 1-00 ಜಮೀನು ಸಿರುಗುಪ್ಪ ಸಬ್ ಉಪನೊಂದಣಿ ಕಛೇರಿ ಪತ್ರ ನಂ: 5265/2015-16 ದಿ: 4-11-2015 ರ ದಾನ ಪತ್ರ ನೊಂದಣಿ ಪ್ರಕಾರ ಹಾಗೂ ಸಿವಿಲ್ ನ್ಯಾಯಾಲಯದ ಸಿರುಗುಪ್ಪ ಇವರ ಅಂತಿಮ ಆದೇಶಕ್ಕೆ ಒಳಪಟ್ಟು ರಘುಮಂಜುನಾಥ ರೆಡ್ಡಿ ಬಿ. ತಂದೆ: ಭೀಮರೆಡ್ಡಿ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:24-06-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು,
ಸಿರುಗುಪ್ಪ ತಾಲೂಕು

ನಾಡ ಕಾರ್ಯಾಲಯ, ಕರೂರು.

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು